## Calling Attention to Matters of Urgent Public Importance

MADAM SPEAKER.—Now Sri Konandur Lingappa to call the attention of the Minister for Industries to the inconvenience caused to the Sugarcane growers due to the refusal by Salarjung Sugar factory, Munirabad, to purchase the sugarcane.

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ನನ್ನ ಗಮನ ಸೆಳೆಯುವ ಸೂಚನೆ ಏನಿದೆಯೋ ಅದರ ಬಗ್ಗೆ ಈಗಾಗಲೇ ಅನೇಕ ಸಮಸ್ಯೆಗಳು ಇತ್ಯರ್ಥವಾಗಿರುವುದರಿಂದ, ಆ ಒಂದು ಸಮಸ್ಯೆ ಕುರಿತು ಈ ಸಭೆಯ ಗಮನವನ್ನು ಸೆಳೆಯುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಆದ್ದರಿಂದ ಇದರ ಬಗ್ಗೆ ಯಾವ ಪ್ರಶ್ನೆಯನ್ನೂ ನಾನು ಕೇಳುವುದಿಲ್ಲ.

### (i) *re*: Dilapidated condition of the School building at Ahmadapura in Kanakatte Hobli of Arsikere Taluk.

ಶ್ರೀ ಎಚ್. ಎಸ್. ಸಿದ್ದಪ್ಪ (ಅರಸೀಕೆರೆ).—ನಾನು ಆ ದೃಷ್ಟಿಯಿಂದ ಹೇಳುತ್ತಾ ಇಲ್ಲ. ಈ ಕಾಲ ಅಟೆನ್‌ಷನ್ ನೋಟೀಸುಗಳನ್ನು ಆಗಿಂದಾಗ್ಗೆ ತೆಗೆದುಕೊಳ್ಳಿದ್ದರೆ, ಕಾಲಗತಿಸಿದ ನಂತರ 8 ತಿಂಗಳ ಮೇಲೆ ಅದಕ್ಕೆ ಉತ್ತರಗಳನ್ನು ಸರ್ಕಾರ ಒದಗಿಸಿದರೇನು, ಬಿಟ್ಟರೇನು ?

ಅಧ್ಯಕ್ಷರು.—8 ತಿಂಗಳೆಲ್ಲಿ ಆಯಿತು ?

ಶ್ರೀ ಎಚ್. ಎಸ್. ಸಿದ್ದಪ್ಪ.—ನಿಧಾನವಾದರೆ ಅಲ್ಲಿ ಇದ್ದ ಲಕ್ಯೂನ ಸರಿಹೋಗುತ್ತದೆ.

ಅಧ್ಯಕ್ಷರು.—ಹಾಗೆ ಅದು ಸರಿಹೋದ ಮೇಲೆ ಇಲ್ಲಿ ಇನ್ನು ಪ್ರಶ್ನೆ ಕೇಳಬೇಕಾದ ಅಗತ್ಯ ಇರುವುದಿಲ್ಲ.

Sri H. S. SIDDAPPA.—I call the attention of the Minister for Education to the danger to the life of the pupils due to the dilapidated condition of the School building at Ahmadapur in Kanakatte Hobli of Arsikere Taluk.

Sri A. R. BADARINARAYANA (Minister for Education)—Sir I State as follows: –

The Deputy Director of Public Instruction, Hassan who visited the spot an found that the school building in question was in a dilapidated condition and has given instructions to the Head Master not to conduct classes in that building and accordingly, classes are being run in a private building provided by the villagers. Local pepole have also promised to construct a shed in the locality and the work has also commenced.

The procedure and the pattern for construction of Primary School Buildings is well set. If the Taluk Development Board either from its own funds or supplemented by the donation of local people is prepared to meet the balance of the cost of construction of primary school building over and above Rs. 2,000 which is the grant from the Government the lack of proper school building at Ahmadapur could be remedied.

During the year 1973–74 from out of the amount earmarked in the education budget for construction of class rooms the Deputy Commissioner, Hassan would be directed to provide a sum of Rs. 2,000 for

construction of the Class rooms at this place subject to the condition that the balance is met by the Taluk Development Board by itself or supplemented by local efforts.

ಶ್ರೀ ಎಚ್. ಎಸ್. ಸಿದ್ದಪ್ಪ.—ತಾವು ಪ್ಯಾರ ಒಂದರಲ್ಲಿ 2000 ರೂಪಾಯಿಗಳ ಮೇಲ್ಪಟ್ಟು ಬೀಳತಕ್ಕ ಖರ್ಚನ್ನು ಗ್ರಾಮಸ್ಥರು ಕೊಡುವುದಕ್ಕೆ ಒಪ್ಪಿದ್ದಾರೆಂದು ಹೇಳಿರುವುದು ಸರಿಯಲ್ಲ. ಈಗಾಗಲೇ ಆಲ್ಲರತಕ್ಕ ಗ್ರಾಮದ ಜನರು ನಾಲ್ಕೈದು ಸಾರಿ ಅಲ್ಲಿ ಷೆಡ್ಡನ್ನು ಪ್ರತಿಸಾರ್ತಿಗೂ 400—500 ರೂಪಾಯಿಗಳಿಗೆ ಮೇಲ್ಪಟ್ಟು ಖರ್ಚುಮಾಡಿ ಕಟ್ಟಿಸಿಕೊಟ್ಟಿದ್ದಾರೆ. ಈ ದಿವಸ ಆ ಜನರ ಕೈಲಿ ಕಾಸಿಲ್ಲ. ಆಲ್ಲಿರತಕ್ಕವರೆಲ್ಲಾ ಮುಸಲ್ಮಾನರು—ಕೂಲಿಯಿಂದ ಜೀವನ ಮಾಡತಕ್ಕ ಜನರು. ಆದುದರಿಂದ ಸರ್ಕಾರದವರೇ ಆ ಕಟ್ಟಡವನ್ನು ಪೂರ್ತಿಯಾಗಿ ಸರ್ಕಾರದ ವೆಚ್ಚದಿಂದ ಮಾಡಿಸಿ ಕೊಡುವುದಕ್ಕೆ ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತಾರೆಯೇ ?

ಶ್ರೀ ಎ. ಆರ್. ಬದರೀನಾರಾಯಣ.—ಗ್ರಾಮಸ್ಥರು ಐದಾರು ಸಾರ್ತಿ ಹಣ ಖರ್ಚು ಮಾಡಿ ಅಲ್ಲಿ ಕಟ್ಟಡವನ್ನು ಕಟ್ಟಿಸಿಕೊಟ್ಟ ವಿಚಾರ ನನ್ನ ಫೈಲಿನಲ್ಲಿ ಇಲ್ಲ. ಇದು ಬಹಳ ದೊಡ್ಡ ಸಮಸ್ಯೆ. ಆದ್ದರಿಂದ ಎಲ್ಲ ಖರ್ಚನ್ನೂ ಸರ್ಕಾರದವರೇ ವಹಿಸುತ್ತೇವೆಂದು ಹೇಳುವುದಕ್ಕೆ ಬಹಳ ಕಷ್ಟವಾಗಿದೆ. ಸಾರ್ವಜನಿಕರ ಸಹಾಯ ದೊರೆತರೆ ಸರ್ಕಾರ ಇದನ್ನು ಪರಿಶೀಲಿಸುವುದಕ್ಕೆ ಸಿದ್ಧವಾಗಿದೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಆಲ್ಲಯ ಜನರು ನಾಲ್ಕೈದು ಸಾರಿ ಷೆಡ್ಡನ್ನು ಕಟ್ಟಿಸಿ ಕೊಟ್ಟಿದ್ದು ನಿಜವಾತಾದರೆ, ಅಥವಾ ಸಾಬೀತಾದರೆ, ಅವರು ಪ್ರತಿ ಸಾರಿಗೂ 400—500 ರೂಪಾಯಿಗಳನ್ನು ಆ ಷೆಡ್ಡಿಗೆ ಖರ್ಚುಮಾಡಿದ್ದರೆ, ಅಲ್ಲಿರತಕ್ಕ ಜನರು ತೀರಾ ಬಡವರಾಗಿದ್ದರೆ, ಆ ಗ್ರಾಮದ ಭೂ ಕಂದಾಯದಲ್ಲಿ ಇಂಥಾದ್ದಕ್ಕೆ ಕೊಡುವುದಕ್ಕೆ ಅವಕಾಶವಿರುವುದರಿಂದ, ಈ ಬೇಸಿಗೆ ಮುಗಿಯುವುದರೊಳಗೆ ಅಲ್ಲಿ ಆ ಕಟ್ಟಡವನ್ನು ಮಾಡಿಸಿ ಕೊಡುತ್ತೀರಾ ?

ಶ್ರೀ ಎ. ಆರ್. ಬದರೀನಾರಾಯಣ.—ಈಗ ಜಾರಿಯಲ್ಲಿರತಕ್ಕ ಪದ್ಧತಿಯನ್ನು ಹೇಳಿದೆ. ಇನ್ನು ಮಾನ್ಯ ಸದಸ್ಯರು ಭೂಕಂದಾಯದಲ್ಲಿ ಒಂದು ಭಾಗ ಕೊಡುವುದಕ್ಕೆ ಅವಕಾಶವಿದೆ ಎಂದು ಹೇಳಿದ ಅಂಶವನ್ನು ಪರಿಶೀಲನೆ ಮಾಡಲಾಗುತ್ತದೆ.

### (ii) *re*: Damages caused due to fire accident in Rattehalli Village, Shimoga district.

Sri S. M. SHEERANALY CHANDRASEKHAR.—I call the attention of the Minister for Revenue to the damages caused due to fire accident in Rattehalli village of Shimoga Taluk.

Sri N. HUTCHAMASTHY GOWDA (Minister for Revenue).—Sir, I State as follows :

There was a fire accident at Rattehalli village Haranahalli Holbi, Shimoga Taluk, on 1st Aparil 1973 in which 58 houses were burnt. There was however no loss of human life. But one calf and some hens were burnt. The total loss is estimated at Rs. 1,11,450 (Rupees One-lakh eleven thousand, Four-hunderd and fifty only). By way of immediate relief the Tahsildar and Block Development Officer distributed 5 (five) quintals of rice and the Taluk Board, Shimoga, paid Rs. 50 (Ruppees Fifty only) to each of the victims. The Deputy Commissioner, Shimoga District, Shimoga, has sanctioned a cash grant of Rs. 10,000 (Rupees Ten thousand only). Further grant of cash relief and building materials to the victims is under consideration.

(SRI N. HUTCHAMASTHY GOWDA)

Powers have been delegated to the Revenue Officers to grant/relief to victims of Natural Calamities as noted below :

| | | |
|---|---|---|
| (a) In case of loss upto Rs. 200 | ... | Full extent. |
| (b) In case the loss is more than Rs. 2 0 but not more than Rs. 1,000. | ... | 50% of the loss subject to a minimum of Rs. 200. |
| (c) In case the loss exceeded Rs. 1,000. | ... | Rs. 500. |

The cash relief indicated above will be in addition to the grant, where necessity of building materials of the value not exceeding Rs. 300.

ಶ್ರೀ ಎಸ್. ಎಂ. ಶೀರ್ವಾಳಿ ಚಂದ್ರಶೇಖರ್.—ಸ್ವಾಮಿ, ಈಗ ಹೇಳಿದ ವರದಿಯಲ್ಲಿ ಎರಡು ತಪ್ಪು ಅಭಿಪ್ರಾಯಗಳು ಬಂದಿವೆ. ಒಂದು ಐದು ಕ್ವಿಂಟಾಲ್ ಅಕ್ಕಿಯನ್ನು ಕೊಟ್ಟಿದೆ ಎಂದು ಹೇಳಿದ್ದು. ಅಲ್ಲಿ ಕೊಟ್ಟಿರುವುದು ನಾಲ್ಕು ಕ್ವಿಂಟಾಲ್ ಮಾತ್ರ. ಇನ್ನು ಎರಡನೆಯ ತಪ್ಪು ಎಂದರೆ ಸುಟ್ಟಿರುವುದು 58 ಮನೆಗಳೆಂದು ಹೇಳಿದ್ದಾರೆ. ಆದರೆ ಅಲ್ಲಿ ಸುಟ್ಟಿರುವುದು 60 ಮನೆಗಳು. ಆ ಜನರು ಎಲ್ಲವನ್ನೂ ಕಳೆದುಕೊಂಡು ನಿರ್ಗತಿಕರಾಗಿದ್ದಾರೆ. ಅವರ ಕೈಲಿ ಮೂರು ಕಾಸೂ ಇಲ್ಲ. ಆದುದರಿಂದ ಮಳೆಗಾಲ ಪ್ರಾರಂಭವಾಗುವುದಕ್ಕೆ ಮೊದಲೇ ಸರ್ಕಾರದವರು ಕಟ್ಟಡದ ಸಾಮಾನುಗಳನ್ನು ಕೊಟ್ಟು ಅವರಿಗೆ ಅನುಕೂಲ ಮಾಡುತ್ತಾರೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಾನು ಮಾನ್ಯ ಸದಸ್ಯರು ಹೇಳಿರುವ ಈ ಎರಡು ವಿಷಯಗಳಲ್ಲಿ ವ್ಯತ್ಯಾಸ ಪತಕ್ಕೆ ಆಯಿತೆಂಬುದಕ್ಕೆ ಮತ್ತೆ ಅಧಿಕಾರಿಗಳಿಂದ ವಿಚಾರಮಾಡಿಸಿ ವರದಿಯನ್ನು ತರಿಸಿಕೊಳ್ಳುತ್ತೇನೆ. ಮತ್ತು ಆದಷ್ಟು ಜಾಗ್ರತೆ ಕಟ್ಟಡದ ಸಾಮಾನುಗಳನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡಲಾಗುತ್ತದೆ.

ಶ್ರೀ ಎಸ್. ಎಂ. ಶೀರ್ವಾಳಿ ಚಂದ್ರಶೇಖರ್.—ಅಲ್ಲಿ ಜನರು ಯಾರೂ ತೊಂದರೆಗೀಡಾಗಲಿಲ್ಲ ಎಂದು ಹೇಳೋಣವಾಯಿತು. ಆದರೆ ಅಲ್ಲಿ ಘಾಯಗೊಂಡ 3—4 ಜನರನ್ನು ಆಸ್ಪತ್ರೆಗೆ ಸೇರಿಸಿದ್ದಾರೆ. ಅದರ ಕ್ಲಾರಿಫಿಕೇಷನ್ ಕೂಡ ಮಾನ್ಯ ಸಚಿವರು ತರಿಸಿಕೊಳ್ಳುತ್ತಾರೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಾನು ಹೇಳಿದ್ದು ಸರಿಯಾಗಿದೆ. ಅದರಲ್ಲಿ ಯಾವ ತಪ್ಪೂ ಇಲ್ಲ. ನಾನು ಹೇಳಿದ್ದು 'No loss of human life'. ಎಂದು ಹೇಳಿದರೆ ಅಲ್ಲಿ ಯಾರಿಗೂ ಘಾಯ ಪಗೈರೆಗಳಾಗಲಿಲ್ಲ ಎಂದೇನೂ ಹೇಳಲಿಲ್ಲ. ಆದುದರಿಂದ ಇದರಲ್ಲಿ ಯಾವುದೂ ಸುಳ್ಳಾಗಿ ವರದಿಯಾಗಿಲ್ಲ.

ಅಧ್ಯಕ್ಷರು.—ಮಾನ್ಯ ಸದಸ್ಯರಾದ ಸಿದ್ದಪ್ಪ ಅವರ ಕಾಲ್ ಅಟೆನ್‌ಷನ್ ನೋಟೀಸ್ ನಮ್ಮ ಆಫೀಸಿಗೆ ಬಂದದ್ದು ತಾರೀಖು 29-3-1973 ರಲ್ಲಿ ನಮ್ಮ ಆಫೀಸಿನಿಂದ ಅದನ್ನು ಸರ್ಕಾರಕ್ಕೆ ಕಳುಹಿಸಿದ್ದು ತಾರೀಖು 4-4-1973ರಲ್ಲಿ. ಅದಕ್ಕೆ ಸರ್ಕಾರದಿಂದ ಉತ್ತರ ನಿನ್ನೆ ಬಂದಿದೆ. ಅದನ್ನು ಈ ದಿವಸದ ಅಜೆಂಡಾದಲ್ಲಿ ಸೇರಿಸಿದೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ನಾನು ಅನೇಕ ಪ್ರಶ್ನೆಗಳನ್ನು ಮತ್ತು ಕಾಲ್ ಅಟೆನ್‌ಷನ್ ನೋಟೀಸುಗಳನ್ನು ಕಳುಹಿಸಿದ್ದು 1973ನೇ ಜನವರಿ ತಿಂಗಳಲ್ಲಿ. ಆದರೆ ಇನ್ನೂ ಉತ್ತರಗಳು ಬಂದಿಲ್ಲ.

## Requests for taking up some calling attention notices etc.

ಶ್ರೀ ಬಿ. ಇ. ರಾಮಯ್ಯ.—ನಿನ್ನೆ ನಾನು ಒಂದು ಕಾಲ್ ಅಟೆನ್‌ಷನ್ ನೋಟೀಸನ್ನು ಅಧ್ಯಕ್ಷರಿಗೆ ಖುದ್ದಾಗಿ ಕೊಟ್ಟೆ. ಅದು ಬರುವುದು ಒಂದು ದಿವಸ ನಿಧಾನವಾದರೆ ಕೋಟೆಗಟ್ಟಲೆ

ಹಣ ಹಾಳಾಗುವುದು. ಸಂಬಂಧಪಟ್ಟ ಮುಖ್ಯಮಂತ್ರಿಗಳಿದ್ದಾರೆ, ಅದರ ವಿಚಾರ ಹೇಳಲು ಅವಕಾಶ ಕೊಡಬೇಕು. ಎರಡು ದಿನ ಕಳೆದುಹೋದರೆ ಆದರಿಂದ ಉಪಯೋಗವಾಗುವುದಿಲ್ಲ. ಪರಿಸ್ಥಿತಿ ಗಂಭೀರವಾಗಿದೆ. ಎರಡು ನಿಮಿಷ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಸರಕಾರಕ್ಕೆ ಅದನ್ನು ಕಳುಹಿಸುವುದಾಗಿ ನಿನ್ನೆಯೇ ಹೇಳಿದೆ. ಅದಕ್ಕೆ ಉತ್ತರ ಸರಕಾರದಿಂದ ಬರಬೇಡವೇ ? ಸರಕಾರದಿಂದ ಉತ್ತರ ಬಾರದೆ ಹೇಗೆ ಅಜೆಂಡಾದಲ್ಲಿ ಸೇರಿಸುವುದು?

ಶ್ರೀ ಡಿ. ದೇವರಾಜ ಅರಸ್.—ಅದನ್ನು ಆ ಮೇಲೆ ಹೇಳಿ.

ಅಧ್ಯಕ್ಷರು.—ಅವರ ಹತ್ತಿರ ಹೋಗಿ ಮಾತನಾಡಿ.

ಶ್ರೀ ಟಿ. ಆರ್. ಶಾಮಣ್ಣ.—ನಾನು ಲೇಟಾಗಿ ಬಂದೆ, ಯಾವಾಗಲೂ ನಾನು ಲೇಟಾಗಿ ಬರುವುದಿಲ್ಲ. ನನಗೆ ನನ್ನ ಕಾಲ್ ಅಟೆನ್‌ಷನ್ ನೋಟಿಸ್ ಬಗ್ಗೆ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ನಾನು ಕರೆದಾಗ ತಾವಿರಲಿಲ್ಲ, ಮಂತ್ರಿಗಳು ಹೊರಟು ಹೋಗಿದ್ದಾರೆ. ನಾಳೆ ತೆಗೆದುಕೊಳ್ಳುತ್ತೇನೆ.

ಶ್ರೀ ಎಸ್. ಎಸ್. ಕೃಷ್ಣನ್.—ರೂಲ್ 312 ರ ಪ್ರಕಾರ ನಾನು ಒಂದು ನೋಟಿಸ್ ಕಳುಹಿಸಿದ್ದೆ.

ಅಧ್ಯಕ್ಷರು.—ಅದೇನಿದ್ದರೂ ಸಾಯುಂಕಾಲ ತೆಗೆದುಕೊಳ್ಳುವ ವಿಷಯ, ಅದನ್ನು ಅಜೆಂಡಾದಲ್ಲಿ ಹಾಕುತ್ತೇವೆ.

Sri S. M. SHEERANALLY CHANDRASEKHAR.—Can you take up my Short Notice Question which has lapsed ?

MADAM SPEAKER.—How can I take it up?

ಶ್ರೀ ಕೆ. ಎಚ್. ಹನುಮೇಗೌಡ.—ಹಾಸನ ಜಿಲ್ಲೆಗೆ ಸಂಬಂಧಪಟ್ಟ ಹಾಗೆ ನಾನು ಕಾಲ್ ಅಟೆನ್‌ಷನ್ ನೋಟೀಸು ಕಳುಹಿಸಿದ್ದೆ. ಮುಖ್ಯಮಂತ್ರಿಗಳಿದ್ದಾರೆ. ಅದು ಮುಖ್ಯವಾದ ವಿಚಾರಕ್ಕೆ ಸಂಬಂಧಪಟ್ಟಿದೆ, ಅದರ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ.

ಅಧ್ಯಕ್ಷರು.—ಅದನ್ನು ತರಿಸಿ ನೋಡುತ್ತೇನೆ.

## Strike at the West Coast Paper Mills, Dendeli

ಶ್ರೀ ಸಿ. ಬೈರೇಗೌಡ (ವೇಮಗಲ್).—ವೆಸ್ಟ್ ಕೋಸ್ಟ್ ಪೇಪರ್ ಮಿಲ್ಸ್‌ಗೆ ಸಂಬಂಧಪಟ್ಟ ಸುಮಾರು ಏಳು ಸಾವಿರ ಜನ ಕಾರ್ಮಿಕರು ಸ್ಟ್ರೈಕ್ ಮಾಡುತ್ತಿದ್ದಾರೆ, ಇದರ ಬಗ್ಗೆ ನಾನು ನೋಟಿಸು ಕಳುಹಿಸಿದ್ದೆ. ಅವರು ಒಂದು ಯೂನಿಯನ್ ಮಾಡಿಕೊಂಡಿದ್ದಾರೆ ಇದರ ಬಗ್ಗೆ ಪತ್ರಿಕೆಯಲ್ಲಿ ಎಡ್ವರ್ಟೈಜಮೆಂಟ್ ಕೊಟ್ಟಿದ್ದಾರೆ. ಮ್ಯಾನೇಜ್‌ಮೆಂಟಿನವರು ಒಂದು ಯೂನಿಯನ್ ಮಾಡಿಕೊಂಡಿದ್ದಾರೆ, ಬಾಯಿಗೆ ಬಂದಹಾಗೆ ಅವರು ಅಡ್ವರ್ಟೈಜಮೆಂಟ್ ಕೊಟ್ಟಿದ್ದಾರೆ, ಇದರ ಬಗ್ಗೆ ಬೇಗ ಉತ್ತರ ಕೊಡಬೇಕು.

ಅಧ್ಯಕ್ಷರು.—ಅದರ ಬಗ್ಗೆ ನೋಟೀಸ್ ಕಳುಹಿಸಿದ್ದರೆ ಅದನ್ನು ನಾನು ಮೊದಲು ನೋಡಬೇಕು, ನೋಡುತ್ತೇನೆ.

ಶ್ರೀ ಎಸ್. ಎಸ್. ಸಿದ್ದಪ್ಪ.—ಕಾಲ್ ಅಟೆನ್‌ಷನ್ ನೋಟಿಸು ಮತ್ತು ಪ್ರಶ್ನೆಗಳ ಬಗ್ಗೆ ಒಂದು ಕ್ಲಾರಿಫಿಕೇಷನ್ ಬೇಕು. ಕಳೆದ ಜನವರಿಯಲ್ಲಿ ನಾನು ಕೆಲವು ಪ್ರಶ್ನೆಗಳನ್ನು ಕೊಟ್ಟಿದ್ದೆ, ಈ ಅಧಿವೇಶನದಲ್ಲಿ ಅವುಗಳನ್ನು ರೀನ್ಯೂ ಮಾಡಲಾಯ್ತು, ಇನ್ನೂ ಅವಕ್ಕೆ ಉತ್ತರ ಬಂದಿಲ್ಲ. ಯಾವಾಗ ಉತ್ತರ ಕೊಡುವುದು ? ಅವು ಕ್ವಾಸ್ಚನ್ಸ್ ಆಗುತ್ತವೆಯೇ ! ಎರಡನೆಯದು ಕಾಲ್ ಅಟೆನ್‌ಷನ್‌ಗಳಿಗೆ ಬೇಗ ಉತ್ತರ ಬಾರದಿದ್ದರೆ ಪ್ರಯೋಜನವಾಗುವುದಿಲ್ಲ.

ಅಧ್ಯಕ್ಷರು.—ಅದನ್ನು ನಾನು ನೋಡಿ ಸಭೆಗೆ ಇರುವ ವಿಚಾರ ತಿಳಿಸುತ್ತೇನೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಪರೀಕ್ಷೆಗೆ ಹಣ ಕಟ್ಟಬೇಕು. ಕಟ್ಟಿದ್ದಕ್ಕೆ ರಸೀದಿ ಕೊಡುವುದಿಲ್ಲ. ಇದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ. ಇದರ ಬಗ್ಗೆ ಕಾಲ್ ಅಟೆನ್‌ಷನ್ ಕಳಿಸಿದೆ. ಉತ್ತರ ಅದಕ್ಕೆ ಬರುವುದು ತಡವಾದರೆ ಪ್ರಯೋಜನವಾಗುವುದಿಲ್ಲ, ತಡವಾಗದ ಹಾಗೆ ನೋಡಿಕೊಳ್ಳಬೇಕು.

ಶ್ರೀ ಡಿ. ದೇವರಾಜ ಅರಸ್.—ಕಾಲ್ ಅಟೆನ್‌ಷನ್ ನೋಟಿಸ್ ಬಗ್ಗೆ ಒಂದು ವಿಚಾರ ಅಧ್ಯಕ್ಷರ ಗಮನಕ್ಕೆ ತರಬೇಕಾಗಿದೆ. Under Section 63 of the Rules of Procedure and Conduct of Business,

> "( ) A member may with the previous permission of the Speaker, call the attention of a Minister to any matter of urgent public importance and the Minister may make a brief statement or ask for time to make a statement at a later hour or date.
>
> (2) There shall be no debate on such statement at the time it is made.
>
> (3) Not more than one such matter shall be raised at the same sitting.

ಇದರ ಪ್ರಕಾರ ನಾವು ನಡೆದುಕೊಳ್ಳುತ್ತಿದ್ದೆವು. ಒಂದಕ್ಕೆ ಮಾತ್ರ ಅವಕಾಶವಿತ್ತು. ಇತ್ತೀಚೆಗೆ ಅಧ್ಯಕ್ಷರು ಸ್ವಲ್ಪ ರೂಲ್ಸ್ ಸಡಿಲಮಾಡಿ ಒಂದಕ್ಕಿಂತ ಹೆಚ್ಚು ಕಾಲ್ ಅಟೆನ್‌ಷನ್ ನೋಟಿಸ್ ಕೊಡುವುದಕ್ಕೆ ಅವಕಾಶ ಮಾಡಿದ್ದಾರೆ. ಅದರ ಬಗ್ಗೆ ತಕರಾರಿಲ್ಲ. ಮಾನ್ಯ ಸದಸ್ಯರು ಇದರ ಬಗ್ಗೆ ಬಹಳ ಚರ್ಚೆ ಮಾಡುವುದಾದರೆ ಒಂದಕ್ಕಿಂತ ಹೆಚ್ಚು ಕಾಲ್ ಅಟೆನ್‌ಷನ್ ನೋಟಿಸ್‌ಗೆ ಅವಕಾಶ ಕೊಡಬಾರದೆಂದು ನಾನು ಅಧ್ಯಕ್ಷರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ತಕರಾರು ಮಾಡುವುದಕ್ಕೆ ನಾನು ಹೋಗಿಲ್ಲ. ರೂಲ್ಸ್ ಪರ್ಮಿಟ್ ಮಾಡುವುದಿಲ್ಲವೆಂಬುದನ್ನು ನಾನು ಒಪ್ಪುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಇದರ ಮೇಲೆ ಚರ್ಚೆ ಬೇಡ, ಅಧ್ಯಕ್ಷರಿದ್ದಾರೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಅವರು ಹೇಳಿದಂತೆ ಒಪ್ಪಿಕೊಳ್ಳಲು ನಾವು ತಯಾರಿದ್ದೇವೆ.

ಅಧ್ಯಕ್ಷರು.—ಸದಸ್ಯರಿಗೆ ತೊಂದರೆಯಾಗುವುದೆಂದು ನಾನು ಸ್ವಲ್ಪ ಅವಕಾಶ ಮಾಡಿಕೊಟ್ಟಿದ್ದೇನೆ. ಇದರ ಮೇಲೆ ಚರ್ಚೆ ಬೇಡ.

ಶ್ರೀ ಎಚ್. ಎಸ್. ಸಿದ್ದಪ್ಪ.—ನಾನು ಬೇಕಾದರೆ ಕ್ಷಮಾಪಣೆ ಕೇಳುವುದಕ್ಕೆ ತಯಾರಿದ್ದೇನೆ. ನಾನು ತಮ್ಮನ್ನು ಪ್ರಶ್ನೆ ಮಾಡುವುದಿಲ್ಲ.

## Statement of Demands for Grants to Cover Expenditure incurred in Excess of voted Grants and Changed Appropriations for 1967-68 —Presentaton.

MADAM SPEAKER.—I have received a message from the Governor which is as follows :—

> "I, Mohanlal Sukhadia, Governor of Mysore, do hereby direct that the Demands for Grants to cover Expenditure incurred in excess of Voted Grants and Charged Appropriations during 1967-1968 appended hereto shall be presented to the Legislative Assembly as required by Article 205 (1) (b) of the Constitution of India."

Sri M. Y. GHORPADE (Minister for Finance).—I present a statement showing the Demands for Grants to cover expenditure incurred in excess of voted grants and charged appropriations during 1967-1968 as required by article 205(1)(b) of the Constitution of India.

MADAM SPEAKER.—This Statement is presented. Sri Konandur Lingappa will please continue his speech.

## Mysore Land Reforms Amendment Bill 1973 as reported by the J.S.C.

*Motion to Consider*

[*Debate contd.*]

† ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಸನ್ಮಾನ್ಯ ಅಧ್ಯಕ್ಷಣಿಯವರೇ, ಸಂಯುಕ್ತ ಪರಿಶೀಲನಾ ಭೂಸುಧಾರಣೆಯ ಸಮಿತಿಯ ವರದಿಯ ಬಗ್ಗೆ ನಾನು ಮಾತನಾಡುತ್ತೇನೆ; ಧರ್ಮ ಮತ್ತು ಧರ್ಮ ಸಂಸ್ಥೆಗಳು, ಮಠಗಳು, ವಿದ್ಯಾ ಸಂಸ್ಥೆಗಳು ಇವುಗಳ ಬಗ್ಗೆ ಯಾವರೀತಿಯ ವಿನಾಯಿತಿ ಕೊಡಬಾರದು ಎಂದು ಹೇಳಿ ಸಮಿತಿಯವರು ಶಿಫಾರಸ್ ಮಾಡಿದ್ದಾರೆ. ಅದಕ್ಕೆ ನನ್ನ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸುತ್ತಾ ಮಾತನಾಡುತ್ತೇನೆ. ಇವತ್ತು ಧಾರ್ಮಿಕ, ಮಠ ಮತ್ತು ವಿದ್ಯಾ ಸಂಸ್ಥೆಗಳು, ಈ ಮೂರರ ಹೆಸರಿನಲ್ಲಿ ರಾಷ್ಟ್ರದಲ್ಲಿ ರಾಜ್ಯದಲ್ಲಿ ಬಹಳ ಶೋಷಣೆ ನಡೆಯಿರುವುದನ್ನು ನಾನು ಕಂಡಿದ್ದೇನೆ. ಅಂತ ಮಾತ್ರಕ್ಕೆ ಎಲ್ಲಾ ಮಠಾಧೀಶರರು, ಎಲ್ಲಾ ಧಾರ್ಮಿಕ ಸಂಸ್ಥೆಗಳು, ಎಲ್ಲಾ ಶಿಕ್ಷಣ ಸಂಸ್ಥೆಗಳು ಒಂದೇ ರೂಪ, ಒಂದೇ ಗುಣ, ಒಂದೇ ಸ್ವಭಾವ ಹೊಂದಿವೆ ಎಂದು ನಾನು ಭಾವಿಸುವುದಿಲ್ಲ. ಒಳ್ಳೆಯ ಮಠಾಧಿಪತಿಗಳು ಇರಬಹುದು, ಒಳ್ಳೆಯ ಧರ್ಮ ಸಂಸ್ಥೆಗಳು ಇರಬಹುದು, ಒಳ್ಳೆಯ ಶಿಕ್ಷಣ ಸಂಸ್ಥೆಗಳು ಇರಬಹುದು. ಆದರೆ ಬಹುತೇಕ ಧರ್ಮ ಸಂಸ್ಥೆಗಳು ಮತ್ತು ಮಠಗಳು ಹಾಗೂ ಶಿಕ್ಷಣ ಸಂಸ್ಥೆಗಳ ಹೆಸರಿನಲ್ಲಿ ಮಣ್ಣಿನ ಮಕ್ಕಳಿಗೆ ಅನ್ಯಾಯವಾಗಿರುವುದನ್ನು, ಶೋಷಣೆಯಾಗಿರುವುದನ್ನು ನಾವು ಕಂಡುಂಡಿದ್ದೇವೆ. ಈಗ ಒಂದು ಮಾತನ್ನು ತಮ್ಮ ಮೂಲಕ ನಮ್ಮ ರಾಜ್ಯದ ಎಲ್ಲಾ ಮಠಾಧಿಪತಿಗಳಿಗೂ, ಧರ್ಮಸಂಸ್ಥೆಗಳಿಗೂ ಹಾಗೂ ಶಿಕ್ಷಣ ಸಂಸ್ಥೆಗಳಿಗೂ ನಿವೇದಿಸಿಕೊಳ್ಳುವುದಕ್ಕೆ ಆಪೇಕ್ಷೆಪಡುತ್ತೇನೆ. ಈಗ ಬದಲಾವಣೆಯಾಗುತ್ತಿರುವ ಕಾಲಕ್ಕೆ ತಕ್ಕಂತೆ ಅವರು ಹೊಂದಿಕೊಂಡು ನಡೆಯಬೇಕಾದ್ದಲ್ಲಿ ಜನ ತಮ್ಮ ಸಂರಕ್ಷಣೆಗೋಸ್ಕರ ಮುಂದೆ ಯಾವ ಮುಟ್ಟಕ್ಕೆ ಬಂದಾರೂ ಎನ್ನುವ ತಕ್ಕಂಥ ವಿಷಯವನ್ನು ಅವರು ಊಹೆ ಮಾಡುವುದು ಅಸಾಧ್ಯ. ಇವತ್ತು ಈ ಮಸೂದೆಗೆ ಸಂಪೂರ್ಣ ಬೆಂಬಲ ಕೊಡುವುದರ ಮೂಲಕ ತಮ್ಮ ಧರ್ಮವನ್ನು ಉಳಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು ಎಂದು ವಿನಯಪೂರ್ವಕವಾಗಿ ನಾನು ಕೇಳಿಕೊಳ್ಳುತ್ತೇನೆ. ಅದನ್ನು ಬಿಟ್ಟು, ಇದರ ವಿರುದ್ಧ ಏನಾದರೂ ಪ್ರಚಾರ, ಅಪಪ್ರಚಾರ ಆಂದೋಲನವನ್ನು ನಡೆಸುವ ಗೋಜಿಗೆ ಹೋದೆಯೆ ಆದರೆ, ಜನಕ್ಕೆ ತಮ್ಮನ್ನು ತರಾಟೆಗೆ ತೆಗೆದುಕೊಳ್ಳತಕ್ಕ ಪರಿಸ್ಥಿತಿ ಈ ರಾಜ್ಯದಲ್ಲಿ ಬಂದೀತು. ಈ ದೃಷ್ಟಿಯಿಂದ ಅವರ ಹಿತದೃಷ್ಟಿಯಿಂದ, ಮಠಾಧಿಪತಿಗಳ, ಧರ್ಮ ಸಂಸ್ಥೆಗಳನ್ನು ನಡೆಸತಕ್ಕವರ ಹಿತದೃಷ್ಟಿಯಿಂದ ನಾನು ಹೇಳುತ್ತೇನೆ, ಯಾವ ರೀತಿಯಲ್ಲಿ ಇದರ ಬಗ್ಗೆ ವಿರೋಧವನ್ನು ವ್ಯಕ್ತ ಮಾಡದೆ ಅದಕ್ಕೆ ಸಂಪೂರ್ಣವಾದ ಬೆಂಬಲವನ್ನು ಕೊಡಿ, ಇಲ್ಲದಿದ್ದಲ್ಲಿ ಜನ ನಿಮ್ಮನ್ನು ಹಾಗೆಯೇ ಬಿಡರಾರರು. ತಮ್ಮ ಹಿತವನ್ನು ನಂಬಿ ಮಾಡಿಕೊಳ್ಳಿ. ಏಕೆಂದರೆ, ಗೇಣಿವಾರರ, ಕೂಲಿಗಾರರ ಹೊಟ್ಟೆಯಲ್ಲಿ ರತಕ್ಕ ಸಿಟ್ಟು ರಿಚ್ಚಿಗೆ ಬಂದಾಗ ಇಲ್ಲಿ ಏನಾದೀತು? ಪರಿಣಾಮ ರಕ್ತ ಕ್ರಾಂತಿ ಅಲ್ಲದೆ ಬೇರೆ ಏನು ಅಲ್ಲ. ಹೊಟ್ಟೆಯಲ್ಲುರತಕ್ಕ ಸಿಟ್ಟು ರಚ್ಚಿಗೆ ಬಂದಾಗ ಅವರ ಕೈ ಯಾರ ಕುತ್ತಿಗೆ ಹೋಗುತ್ತದೆಯೋ ಎಂದು ನಾವು ಅದನ್ನು ಕಲ್ಪನೆ ಮಾಡುವುದಕ್ಕೆ ಸಾಧ್ಯವಿಲ್ಲ. ಇಂಥ ಒಂದು ಭಯಂಕರವಾದ ಸ್ಥಿತಿಯನ್ನು, ಅಹಿಂಸಾತ್ಮಕ ವಾತಾವರಣವನ್ನು ಉಂಟು ಮಾಡತಕ್ಕ ಸ್ಥಿತಿಯನ್ನು ನಾವು ಕಂಡುಕೊಳ್ಳಬಾರದು. ಭಾರತೀಯರು, ಈ ರಾಷ್ಟ್ರದ ಜನ ಅಹಿಂಸೆ, ಶಾಂತಿ, ಇವುಗಳ ಹೆಸರಿನಲ್ಲಿ ಉಳಿದು ಬೆಳೆದು ಬಂದಿರತಕ್ಕ ಜನ. ಅಂಥವರು ರಕ್ತ ಕ್ರಾಂತಿ ಮಾಡತಕ್ಕ ಸ್ಥಿತಿಗೆ ನಾವು ಎಂದೂ ಹೋಗಬಾರದು ಎಂದು ಈ ಮಾತನ್ನು ಹೇಳಲು ಬಯಸುತ್ತೇನೆ. ಈಗ ನಾವು ಪ್ರಜಾಪ್ರಭುತ್ವ